ರಾಮನಗರ ಜಿಲ್ಲೆಯ ಕಥೆಗಾರರ ಕಥೆಗಳಲ್ಲಿ ಪ್ರಾದೇಶಿಕತೆಯ ಸ್ಪರ್ಶ

ಮಹೇಶ್ ಡಿ.ಬಿ.*

DOI: https://doi.org/10.5281/zenodo.24338724

ABSTRACT

ಕನ್ನಡ ಸಾಹಿತ್ಯದಲ್ಲಿ ಅತಿ ಹೆಚ್ಚು ಜನಮನ್ನಣೆಯನ್ನು ಪಡೆದ ಸಾಹಿತ್ಯ ಪ್ರಕಾರವೆಂದರೆ ಗದ್ಯಸಾಹಿತ್ಯ. ಸರಳವಾದ ಭಾಷೆ, ಸಹಜವಾದ ನಿರೂಪಣಾ ಶೈಲಿ ಹಾಗೂ ಬದುಕಿನ ನೈಜ ಅನುಭವಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ಸಾಮರ್ಥ್ಯದಿಂದಾಗಿ ಗದ್ಯಸಾಹಿತ್ಯ ಓದುಗರನ್ನು ಹೆಚ್ಚು ಆಕರ್ಷಿಸಿದೆ. ವಿಶೇಷವಾಗಿ ಕಥೆ, ಕಾದಂಬರಿ, ಪ್ರಬಂಧ, ಆತ್ಮಕಥೆ, ಮೊದಲಾದ ಗದ್ಯ ಪ್ರಕಾರಗಳು ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಈ ರೀತಿಯಾಗಿ ಓದುಗರನ್ನು ಆಕರ್ಷಿಸಿದ ಗದ್ಯ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಸಣ್ಣ ಕಥೆಯೂ ಒಂದಾಗಿದೆ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಮತ್ತು ಪ್ರೇರಣೆಯಿಂದ ಕನ್ನಡದಲ್ಲಿ ರೂಪುಗೊಂಡ ಸಣ್ಣ ಕಥೆ ತನ್ನ ಮೂಲ ದೇಶೀಯತೆಯನ್ನು ಉಳಿಸಿಕೊಂಡು, ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಜೀವನಾನುಭವಗಳಿಗೆ ಸ್ಪಂದಿಸುತ್ತಾ ಬೆಳವಣಿಗೆಯನ್ನು ಕಂಡಿದೆ.

KEYWORDS: ಪ್ರಾದೇಶಿಕತೆ, ಸಣ್ಣಕಥೆ, ಗ್ರಾಮೀಣ ಬದುಕು, ರಾಮನಗರ ಜಿಲ್ಲೆ, ಸ್ಥಳೀಯ ಸಂಸ್ಕೃತಿ.

* **ಮಹೇಶ್ ಡಿ.ಬಿ.,** ಸಂಶೋಧನಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಪರಿಚಯ:

ವಿವಿಧ ಕಾಲಘಟ್ಟಗಳಲ್ಲಿ ತನ್ನದೇ ಆದ ವಸ್ತು, ಆಶಯ, ನಿರೂಪಣಾ ವಿಧಾನ ಮತ್ತು ಭಾಷಾ ಪ್ರಯೋಗಗಳ ಮೂಲಕ ಸಣ್ಣ ಕಥೆ ಕನ್ನಡ ಸಾಹಿತ್ಯದಲ್ಲಿ ತನ್ನ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಅದರಲ್ಲಿಯೂ ಪ್ರಾದೇಶಿಕತೆಯು ಸಣ್ಣ ಕಥೆಯ ಪ್ರಮುಖ ಅಭಿವ್ಯಕ್ತಿ ನೆಲೆಗಳಲ್ಲಿ ಒಂದಾಗಿ ರೂಪುಗೊಂಡಿರುವುದನ್ನು ಗಮನಿಸಬಹುದು. ನಿರ್ದಿಷ್ಟ ಪ್ರದೇಶದ ಭೌಗೋಳಿಕ ಪರಿಸರ, ಜೀವನ, ಆಚಾರ–ವಿಚಾರ, ಸಂಪ್ರದಾಯ, ಸಂಸ್ಕೃತಿ, ಭಾಷೆ ಮತ್ತು ಜಾನಪದ ನಂಬಿಕೆಗಳು ಹಾಗೂ ಅಲ್ಲಿನ ಸಾಮಾಜಿಕ ಬದುಕಿನ ವೈಶಿಷ್ಟ್ಯಗಳನ್ನು ಕಥೆಯ ವಸ್ತುವಿನೊಂದಿಗೆ ಬೆಸೆದುಕೊಳ್ಳುವ ಮೂಲಕ ಸಣ್ಣ ಕಥೆಗಾರರು ಪ್ರಾದೇಶಿಕತೆಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಇಂತಹ ವಸ್ತು ವಿಷಯಗಳನ್ನು ಸಣ್ಣ ಕಥೆಗಳಲ್ಲಿ ಕಟ್ಟಿಕೊಟ್ಟಂತಹ ಪ್ರಮುಖ ಬರಹಗಾರರೆಂದರೆ ಅಮರೇಶ ನುಗಡೋಣಿ, ಬೆಸಗರಹಳ್ಳಿ ರಾಮಣ್ಣ, ಬಸು ಬೇವಿನಗಿಡದ, ಕಾ. ತ. ಚಿಕ್ಕಣ್ಣ ಇನ್ನು ಮುಂತಾದ ಕಥೆಗಾರರು. ಇವರು ತಮ್ಮ ಸ್ವ–ಅನುಭವದ ಸುತ್ತಮುತ್ತಲಿನ ಹಳ್ಳಿಗಾಡಿನ ಪರಿಸರವನ್ನು ಕೇಂದ್ರ ವಸ್ತುವಾಗಿಸಿಕೊಂಡು, ತಮ್ಮ ಸುತ್ತಮುತ್ತಲಿನ ಪಾತ್ರಗಳನ್ನು ಕಥೆಯಲ್ಲಿ ನಿರೂಪಿಸುವ ಮೂಲಕ ಪ್ರಾದೇಶಿಕ ಭಾಷೆಯ ಕಥೆಗಾರರಾಗಿ ಹೊರಹೊಮ್ಮಿದ್ದಾರೆ.

ರಾಮನಗರ ಜಿಲ್ಲೆಯ ಸಣ್ಣಕಥಾ ಸಾಹಿತ್ಯದಲ್ಲಿ ಪ್ರೊ. ಸುಧಾಕರ, ಮೊಗಳ್ಳಿ ಗಣೇಶ್, ಕಾಳೇಗೌಡ ನಾಗವಾರ ಮತ್ತು ಬೈರಮಂಗಲ ರಾಮೇಗೌಡ ಅವರು ತಮ್ಮದೇ ಆದ ವೈಶಿಷ್ಟ್ಯಪೂರ್ಣ ಬರವಣಿಗೆಯ ಮೂಲಕ ಗ್ರಾಮೀಣ ಬದುಕಿನ ನೈಜ ಚಿತ್ರಣವನ್ನು ಕಟ್ಟಿಕೊಟ್ಟ ಪ್ರಮುಖ ಕಥೆಗಾರರಾಗಿದ್ದಾರೆ. ಇವರ ಕಥೆಗಳು ಹಳ್ಳಿಯ ಬದುಕನ್ನು ಕೇವಲ ಹಿನ್ನೆಲೆಯಾಗಿ ಬಳಸದೆ, ಅದರೊಳಗಿನ ಮಾನವೀಯ ಅನುಭವಗಳನ್ನು ಕೇಂದ್ರವಾಗಿಟ್ಟುಕೊಂಡಿವೆ. ಗ್ರಾಮೀಣ ಸಂವೇದನೆ, ಜಾನಪದ ಅಂಶಗಳು, ಸ್ಥಳೀಯ ಸಂಸ್ಕೃತಿಯ ಪ್ರಭಾವ ಮತ್ತು ಪ್ರಾದೇಶಿಕತೆ ಈ ಕಥೆಗಾರರ ಕಥಾಸಾಹಿತ್ಯದ ಮೂಲ ಲಕ್ಷಣಗಳಾಗಿವೆ.

ಸಿದ್ಧಾಂತಪರ ಹಿನ್ನೆಲೆ:

ರಾಮನಗರ ಜಿಲ್ಲೆಯ ಕಥೆಗಾರರ ಕಥೆಗಳಲ್ಲಿ ಈ ಪ್ರಮುಖ ಅಂಶಗಳನ್ನು ಗುರುತಿಸಲಾಗಿದೆ:

1. ಪ್ರಾದೇಶಿಕ ಹಿನ್ನೆಲೆ ದೃಷ್ಟಿಯಿಂದ: ಕಥೆಗಳಲ್ಲಿ ನಿರ್ದಿಷ್ಟ ಪ್ರದೇಶದ ಭೌಗೋಳಿಕ, ಆಚಾರ–ವಿಚಾರ, ಸ್ಥಳೀಯ ಬದುಕಿನ ನೈಜ ಅನುಭವಗಳನ್ನು ಕಟ್ಟಿಕೊಡುವುದು.
2. ಸ್ಥಳೀಯ ಸಾಂಸ್ಕೃತಿಕ ಅಧ್ಯಯನ: ಸ್ಥಳೀಯ ಸಂಸ್ಕೃತಿ, ಸಾಮಾಜಿಕ ಸಂಬಂಧಗಳು, ಜೀವನಶೈಲಿ, ಜಾತಿ ವ್ಯವಸ್ಥೆ, ಗ್ರಾಮೀಣ ಬದುಕು; ಇವುಗಳನ್ನು ಈ ಹಿನ್ನೆಲೆಯಲ್ಲಿ ಗುರುತಿಸುವುದು.

ಸುಧಾಕರ ಅವರ ಕಥೆಗಳು:

ಪ್ರೊ. ಸುಧಾಕರ ಅವರ 'ಕಣ್ಣಿಕಿತ್ತ ಹಸು ಮತ್ತು ಇತರ ಕಥೆಗಳು' ಸಂಕಲನದಲ್ಲಿನ 'ನಾನು ಪ್ರೇಮಿಸಿದ ಹುಡುಗಿ', 'ನಕ್ಷತ್ರ ನಕ್ಕವು', 'ಕೊಡಿ ಬಿತ್ತು ಕೊಡಿ', 'ಮೆರವಣಿಗೆ', 'ಗರಿಕೆಬೇರು', 'ವಿಕಾಸ' ಮುಂತಾದ ಕಥೆಗಳು ಗ್ರಾಮೀಣ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ರಚಿಸಲಾದ ಪ್ರಮುಖ ಕಥೆಗಳಾಗಿವೆ. ಈ ಕಥೆಗಳಲ್ಲಿ ಗ್ರಾಮೀಣ ಬದುಕಿನ ಬಾಹ್ಯ ಚಿತ್ರಣಕ್ಕಿಂತಲೂ ಅಲ್ಲಿನ ಜನರ ಒಳಗಿನ ಭಾವನೆಗಳು, ಸಂವೇದನೆಗಳು ಮತ್ತು ಮಾನವೀಯ ಅನುಭವಗಳು ಕೇಂದ್ರ ಸ್ಥಾನವನ್ನು ಪಡೆದಿವೆ. ಸುಧಾಕರ ಅವರು ಹಳ್ಳಿಯ ಜನರ ಮುಗ್ಧತೆ, ಆಸೆ, ಆಕಾಂಕ್ಷೆ, ಪ್ರೇಮ, ಕೋಪ–ತಾಪ ಮತ್ತು ರಸಿಕತೆಯನ್ನು ಬಹಳ ಹತ್ತಿರದಿಂದ ಕಂಡು ಅನುಭವಿಸಿದ ಲೇಖಕರಾಗಿದ್ದಾರೆ. ಈ ನೈಜ ಅನುಭವಗಳೇ ಅವರ ಕಥೆಗಳಿಗೆ ಜೀವ ತುಂಬುತ್ತವೆ. ಹಳ್ಳಿಯ ಜನರನ್ನು ಅವರು ಕೇವಲ ಪಾತ್ರಗಳಾಗಿ ಕಾಣದೆ, ಬದುಕಿನ ಸಂಕೀರ್ಣತೆಯನ್ನು ಹೊತ್ತ ಜೀವಂತ ವ್ಯಕ್ತಿಗಳಾಗಿ ರೂಪಿಸುತ್ತಾರೆ. ಅವರ ಕಥೆಗಳಲ್ಲಿನ ಪ್ರಮುಖ ಪಾತ್ರಗಳು ಸರಳವಾಗಿದ್ದರೂ ಅವರ ಭಾವಜಗತ್ತು ಗಾಢ ಮತ್ತು ಆಳವಾದದ್ದಾಗಿದೆ.

'ನಾನು ಪ್ರೇಮಿಸಿದ ಹುಡುಗಿ' ಮತ್ತು 'ನಕ್ಷತ್ರ ನಕ್ಕವು' ಕಥೆಗಳಲ್ಲಿ ಗ್ರಾಮೀಣ ಯುವಕರ ಪ್ರೇಮ, ಕನಸುಗಳು ಮತ್ತು ನಿರಾಸೆಗಳ ಸೂಕ್ಷ್ಮ ಚಿತ್ರಣ ಕಂಡುಬರುತ್ತದೆ. ಹಳ್ಳಿಯ ಸಾಂಪ್ರದಾಯಿಕ ವಾತಾವರಣದೊಳಗೆ ಮೂಡುವ ಪ್ರೇಮಾನುಭವಗಳು ಅವುಗಳ ನಿಷ್ಕಳಂಕತೆ ಮತ್ತು ತೀವ್ರತೆ ಕಥೆಗಳಿಗೆ ಭಾವನಾತ್ಮಕ ಆಳವನ್ನು ನೀಡುತ್ತವೆ. 'ಕೊಡಿ ಬಿತ್ತು ಕೊಡಿ' ಮತ್ತು 'ಮೆರವಣಿಗೆ' ಕಥೆಗಳು ಹಳ್ಳಿಯ ಸಾಮಾಜಿಕ ಜೀವನ, ಸಾಮೂಹಿಕ ಆಚರಣೆಗಳು ಮತ್ತು ಜನಸಾಮಾನ್ಯರ ಮನೋಭಾವಗಳನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ಹಳ್ಳಿಯ ಜನರ ರಸಿಕತೆ, ಉತ್ಸಾಹ, ಅಸಹನಶೀಲತೆ ಮತ್ತು ಗುಂಪು ಮನಸ್ಥಿತಿಯ ಸ್ವರೂಪಗಳು ನೈಜವಾಗಿ ಮೂಡಿಬರುತ್ತವೆ. 'ಗರಿಕೆಬೇರು' ಮತ್ತು 'ವಿಕಾಸ' ಕಥೆಗಳಲ್ಲಿ ಗ್ರಾಮೀಣ ಬದುಕಿನ ವಾಸ್ತವಿಕತೆ, ಬಡತನ, ಅಸಮಾನತೆ ಮತ್ತು ಬದಲಾವಣೆಯ ತವಕ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಹಳ್ಳಿಯ ಜನರ ಜೀವನದಲ್ಲಿ ಉಂಟಾಗುವ ಸಣ್ಣ ಸಣ್ಣ ಘಟನೆಗಳ ಮೂಲಕ ಸಮಾಜದ ದೊಡ್ಡ ಪ್ರಶ್ನೆಗಳನ್ನು ಸುಧಾಕರ ಸೂಕ್ಷ್ಮವಾಗಿ ಮಂಡಿಸುತ್ತಾರೆ.

ಕಾಳೇಗೌಡ ನಾಗವಾರ ಅವರ ಕಥೆಗಳು:

ಕಾಳೇಗೌಡ ನಾಗವಾರರ ಸಣ್ಣ ಕಥೆಗಳಲ್ಲಿ ಸ್ಥಳೀಯ ಜಗತ್ತು ಅತ್ಯಂತ ಜೀವಂತವಾಗಿ ತೆರೆದುಕೊಳ್ಳುತ್ತದೆ. ಅವರ ಕಥೆಗಳು ಕೇವಲ ಕಲ್ಪಿತ ಹಿನ್ನೆಲೆಯಲ್ಲಿ ಅಲ್ಲ; ಅವು ಚನ್ನಪಟ್ಟಣ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳ ನೈಜ ಭೌಗೋಳಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದಿಂದ ಉದ್ಭವಿಸಿದ ಜೀವಂತ ಅನುಭವಗಳಾಗಿವೆ. ಬೆಲ್ಲದಹಳ್ಳಿ, ಬೇವೂರು, ನುಗ್ಗೇದೊಡ್ಡಿ, ಕೃಷ್ಣಾಪುರ, ಬ್ಯಾಲದ ಕೆರೆ, ಮೂಗೂರು ಸ್ಥಳನಾಮಗಳು ಹಾಗೂ ನಾಗವಾರರ ಕಥೆಗಳಲ್ಲಿನ ಪಾತ್ರಗಳು ಈ

ಸ್ಥಳೀಯ ನೆಲೆಯಿಂದಲೇ ಉದ್ಭವಿಸುತ್ತವೆ. ಚನ್ನಪಟ್ಟಣ ಮತ್ತು ಅದರ ಸುತ್ತಲ ಗ್ರಾಮಗಳ ಸಾಮಾಜಿಕ ವಾತಾವರಣ, ಜನರ ಜೀವನಶೈಲಿ, ಸಂಸ್ಕೃತಿ ಮತ್ತು ಸಂಘರ್ಷಗಳು ಅವರ ಕಥಾನಾಯಕರನ್ನು ಕೃತಕ ವ್ಯಕ್ತಿಗಳಂತೆ ಕಾಣಿಸದೆ ನೈಜ ಬದುಕಿನ ಪ್ರತಿರೂಪಗಳಾಗಿ ಕಾಣುವಂತೆ ಮಾಡುತ್ತವೆ.

'ಮೀನುಗಳು' ಕಥೆಯ ಹೊಂಬ ಮತ್ತು ಗಿರಿಜಾ, 'ಬೆಟ್ಟಸಾಲು ಮಳೆಯ' ತಿಮ್ಮಕ್ಕ, ಕರಿತಿಮ್ಮಿ, ಶೆಟ್ಟಿ ಮತ್ತು ಮಂಗಪ್ಪ, 'ಕಾಡು' ಕಥೆಯ ತಿಮ್ಮಯ್ಯ ಇವರೆಲ್ಲರೂ ಸ್ಥಳೀಯ ಸಮಾಜದ ಪ್ರತಿನಿಧಿಗಳಾಗಿದ್ದಾರೆ. ಈ ಪ್ರಮುಖ ಪಾತ್ರಗಳನ್ನು ಸುತ್ತುವರಿದಿರುವ ಅನೇಕ ಉಪಪಾತ್ರಗಳು ಸಹ ಹಳ್ಳಿಯ ಬದುಕಿನ ವಿವಿಧ ಆಯಾಮಗಳನ್ನು ಪ್ರತಿನಿಧಿಸುತ್ತವೆ. ರೈತರು, ಕೂಲಿಕಾರ್ಮಿಕರು, ವ್ಯಾಪಾರಿಗಳು, ಮಹಿಳೆಯರು, ಹಿರಿಯರು, ಶೋಷಿತ ವರ್ಗದ ಜನರು; ಈ ಎಲ್ಲ ಪಾತ್ರಗಳು ಸ್ಥಳೀಯ ಪರಿಸರದಿಂದ ಜೀವಂತವಾಗುತ್ತವೆ. ನಾಗವಾರರ ಕಥೆಗಳಲ್ಲಿ ಸ್ಥಳೀಯ ಜಗತ್ತು ಸ್ಥಿರವಾದ ಹಿನ್ನೆಲೆಯಲ್ಲ, ಅದು ಚಲನೆಯಲ್ಲಿರುವ ಜೀವಂತ ಸಮಾಜವಾಗಿದೆ. ಹಬ್ಬಗಳು, ಆಚರಣೆಗಳು, ಕೃಷಿ ಚಟುವಟಿಕೆಗಳು, ಕಾಡು–ಬೆಟ್ಟ, ಕೆರೆಗಳೊಂದಿಗೆ ಮನುಷ್ಯನ ನಿಕಟ ಸಂಬಂಧ; ಈ ಅಂಶಗಳು ಕಥೆಯೊಳಗೆ ಸಹಜವಾಗಿ ಬೆರೆತು ಕಥನಕ್ಕೆ ಸಂಚಲನವನ್ನು ಉಂಟುಮಾಡುತ್ತವೆ. ಈ ಸ್ಥಳೀಯ ಜಗತ್ತು ಪಾತ್ರಗಳ ಬದುಕಿನ ಹಾದಿಯನ್ನು ನಿರ್ಧರಿಸುವ ಶಕ್ತಿಯಾಗಿದೆ.

ಕಾಳೇಗೌಡ ನಾಗವಾರರ 'ಮೀನುಗಳು' ಕಥೆ ಗ್ರಾಮೀಣ ಸಮಾಜದಲ್ಲಿ ನಿಧಾನವಾಗಿ ಆರಂಭಗೊಂಡ ಬದಲಾವಣೆಯ ಗಾಳಿಯು ಬಡ ರೈತ ಸಮುದಾಯ ಮತ್ತು ದಲಿತ ಸಮುದಾಯಗಳ ಬದುಕಿನಲ್ಲಿ ಉಂಟುಮಾಡಿದ ತೊಳಲಾಟಗಳನ್ನು ಅತ್ಯಂತ ಸೂಕ್ಷ್ಮವಾಗಿ ಬಿಂಬಿಸುವ ಕಥೆಯಾಗಿದೆ. ಈ ಕಥೆ ಸಮಾಜದ ಬಾಹ್ಯ ರೂಪಾಂತರಗಳಿಗಿಂತಲೂ, ಆ ರೂಪಾಂತರಗಳು ವ್ಯಕ್ತಿಗಳ ಅಂತರಂಗದ ಮೇಲೆ ಬೀರುವ ಪರಿಣಾಮಗಳನ್ನು ಆಳವಾಗಿ ಅನಾವರಣಗೊಳಿಸುತ್ತದೆ. ಕಥೆಯ ಕೇಂದ್ರದಲ್ಲಿ ಹೊನ್ನ ಮತ್ತು ಹೊಂಬ ಎಂಬ ಇಬ್ಬರು ಬಾಲಕರ ಬದುಕಿನ ಒದ್ದಾಟವಿದೆ. ಈ ಒದ್ದಾಟದೊಳಗೆ ಗ್ರಾಮೀಣ ಸಮಾಜದ ಸಂಕೀರ್ಣ ವಾಸ್ತವವನ್ನು ಕಟ್ಟಿಕೊಡುವ ಮೂರು ಪ್ರಮುಖ ಬಿಂದುಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಮೊದಲನೆಯದು, ಗ್ರಾಮೀಣ ಮಧ್ಯಮ ಜಾತಿಗಳಲ್ಲಿ ವ್ಯಾಪಿಸಿರುವ ಬಡತನ ಮತ್ತು ಅಸ್ಥಿರ ಆರ್ಥಿಕ ವ್ಯವಸ್ಥೆ. ಹಳ್ಳಿಗಳಲ್ಲಿನ ಮಧ್ಯಮ ಕುಟುಂಬಗಳು ಭೂಸ್ವಾಮ್ಯ ಅಥವಾ ಸಾಮಾಜಿಕ ಪ್ರತಿಷ್ಠೆಯ ನೆಲೆಯಲ್ಲಿ ಗುರುತಿಸಿಕೊಂಡಿದ್ದರೂ, ವಾಸ್ತವದಲ್ಲಿ ಅವರು ಬಡತನದ ಪೀಡೆಯಲ್ಲಿ ಬದುಕುತ್ತಿರುವ ಚಿತ್ರಣ ಕಥೆಯಲ್ಲಿ ಸ್ಪಷ್ಟವಾಗಿ ಮೂಡಿಬರುತ್ತದೆ. ಎರಡನೆಯ ಬಿಂದು, ಹಳ್ಳಿಗಳಲ್ಲಿ ಇನ್ನೂ ಗಟ್ಟಿಯಾಗಿ ಉಳಿದಿರುವ ಅಸ್ಪೃಶ್ಯತೆಯ ಸಂಕಟ. ದಲಿತ ಸಮುದಾಯದ ಬದುಕಿನಲ್ಲಿ ಜಾತಿಯೇ ದೈನಂದಿನ ಜೀವನವನ್ನು ನಿರ್ಧರಿಸುವ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿದೆ. ಆಹಾರ, ನೀರು, ಬಟ್ಟೆ, ಕೆಲಸ ಈ ಎಲ್ಲಾ ಅಂಶಗಳಲ್ಲಿ ಜಾತಿಯ ಅಡ್ಡಿ ನಿರಂತರವಾಗಿ ಎದುರಾಗುತ್ತದೆ.

ಹೊಂಬನ ಬದುಕು ಈ ಅಸ್ಪೃಶ್ಯತೆಯ ದಾರುಣ ವಾಸ್ತವಕ್ಕೆ ನಿಚ್ಚಳ ಸಾಕ್ಷಿಯಾಗಿದೆ. ಮೂರನೆಯ ಬಿಂದು, ಗ್ರಾಮ ಮತ್ತು ಪಟ್ಟಣ ಎರಡೂ ಕಡೆ ವ್ಯಾಪಿಸಿರುವ ಮೋಸ–ವಂಚನೆಗಳು ಮತ್ತು ಶೋಷಣೆಯ ರೂಪಗಳು. ಅಭಿವೃದ್ಧಿ–ಬದಲಾವಣೆ ಎಂಬ ಹೆಸರಿನಲ್ಲಿ ಸಮಾಜದಲ್ಲಿ ನಡೆಯುವ ಅನ್ಯಾಯಗಳು ಬಡ ಮತ್ತು ಶೋಷಿತ ವರ್ಗಗಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಕಥೆ ತೋರಿಸುತ್ತದೆ. ಈ ಮೂರು ಬಿಂದುಗಳ ಜೋಡಣೆಯೇ 'ಮೀನುಗಳು' ಕಥೆಯ ಪ್ರಧಾನ ಭೂಮಿಕೆಯಾಗಿದೆ.

ಈ ಸಾಮಾಜಿಕ ಹಿನ್ನೆಲೆಯಲ್ಲಿ ಇನ್ನೂ ಹದಿಹರೆಯದ ವಯಸ್ಸನ್ನು ತಲುಪದ, ಆದರೆ ಬದುಕಿನ ಕಠಿಣ ಸತ್ಯಗಳನ್ನು ಎದುರಿಸಬೇಕಾದ ಬಾಲಕನೊಬ್ಬನ ಮನೋವೈಜ್ಞಾನಿಕ ತೊಳಲಾಟವೂ ಕಥೆಯಲ್ಲಿ ಸೂಕ್ಷ್ಮವಾಗಿ ಚಿತ್ರಿತವಾಗಿದೆ. ತನ್ನದೇ ಜಾತಿಯ ಶ್ರೀಮಂತ ಕುಟುಂಬದ ಸಹಪಾಠಿ ಹುಡುಗಿಯೊಂದಿಗೆ ಅವನಿಗೆ ಉಂಟಾಗುವ ಮುಜುಗರ, ಹಿಂಸೆ ಮತ್ತು ಸಹಜ ಒಡನಾಟ; ಈ ಅನುಭವಗಳು ಕಿಶೋರ ಮನಸ್ಸಿನ ಸಂಕೀರ್ಣತೆಯನ್ನು ಸೂಚಿಸುತ್ತವೆ. ಇಲ್ಲಿ ಆಕರ್ಷಣೆ ಕೇವಲ ವೈಯಕ್ತಿಕ ಭಾವನೆಯಲ್ಲ, ಅದು ಸಾಮಾಜಿಕ ಅಸಮಾನತೆಗಳಿಗೆ ಸಿಲುಕಿದ ಮಾನವ ಸಂಬಂಧಗಳ ಸಂಕೇತವಾಗಿದೆ. 'ಮೀನುಗಳು' ಕಥೆಯಲ್ಲಿನ ಮತ್ತೊಂದು ಮಹತ್ವದ ಅಂಶವೆಂದರೆ, ಹಳ್ಳಿಗಳಲ್ಲಿ ಜಾತಿಯೇ ಬಹುತೇಕ ಜೀವನವನ್ನು ನಿರ್ದೇಶಿಸುತ್ತಿದ್ದರೂ, ಆ ಜಾತಿಯ ವೃತ್ತದಲ್ಲಿಯೇ ಸಂಪತ್ತು, ಅಧಿಕಾರ ಮತ್ತು ಪ್ರತಿಷ್ಠೆಯ ಆಧಾರದ ಮೇಲೆ ಮತ್ತೊಂದು ಶ್ರೇಣೀಕರಣ ಕಾರ್ಯನಿರ್ವಹಿಸುತ್ತಿರುವುದನ್ನು ಲೇಖಕರು ಬಯಲುಮಾಡುತ್ತಾರೆ. ಲೋಹಿಯಾ ಸಮಾಜವಾದದ ಹಿನ್ನೆಲೆ ಚಿಂತನೆ ಹೊಂದಿರುವ ಕಾಳೇಗೌಡ ನಾಗವಾರರು ಈ ಆಂತರಿಕ ವರ್ಗ ವಿಭಜನೆಯನ್ನು ಅತ್ಯಂತ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ.

ಒಕ್ಕಲಿಗ ಜಾತಿಗೆ ಸೇರಿದವನಾಗಿದ್ದರೂ ಎಳನೀರನ್ನು ಕುಡಿಯುವ ಅವಕಾಶವಿಲ್ಲದ ವ್ಯಕ್ತಿ; ಈಜಾಡುವಾಗ ನೆನೆಯುವ ತನ್ನ ಉಟ್ಟ ಬಟ್ಟೆಯನ್ನು ಬಿಚ್ಚಿ ಒಣಗಿಸಲು ಹಾಕಿದಾಗ ಮಾನ ಮುಚ್ಚಿಕೊಳ್ಳಲು ಮತ್ತೊಂದು ತುಂಡು ಬಟ್ಟೆ ಇಲ್ಲದ ದಲಿತ ಬಾಲಕ ಹೊಂಬ; ಈ ದೃಶ್ಯಗಳು ಗ್ರಾಮೀಣ ಸಮಾಜದ ಅಸಮಾನತೆಯ ತೀವ್ರತೆಯನ್ನು ತೋರುತ್ತವೆ. ತೋಟದ ಮಾಲೀಕನಿಂದ ಹೊಂಬ ಮತ್ತು ಹೊನ್ನ ಇಬ್ಬರೂ ಸೇರಿ ಏಟು ತಿನ್ನುವ ಸಂದರ್ಭದಲ್ಲಿ ಜಾತಿಯ ಪ್ರಸ್ತಾಪ ಬಂದು ಹೊಂಬನಿಗೆ ಇನ್ನಷ್ಟು ಅವಮಾನ ಮತ್ತು ಹಿಂಸೆಯ ಅನುಭವವಾಗುತ್ತದೆ. ಈ ಅನುಭವಗಳು ಹೊನ್ನನನ್ನು ಕೇವಲ ಒಂದು ಪಾತ್ರವಾಗಿಸದೆ, ಗ್ರಾಮೀಣ ಸಮಾಜದ ಆಗಿನ ಪರಿಸ್ಥಿತಿಗೆ ನಿಚ್ಚಳ ದರ್ಪಣವಾಗಿಸುತ್ತವೆ.

ಮೊಗಳ್ಳಿ ಗಣೇಶ್ ಅವರ ಕಥೆಗಳು:

ಗ್ರಾಮೀಣ ಬದುಕಿಗೆ ಸಂಬಂಧಿಸಿದ ಕಥೆಗಳನ್ನು ಕೇಂದ್ರವಾಗಿ ಮಾಡಿಕೊಂಡಿರುವ ಮೊಗಳ್ಳಿ ಗಣೇಶ್ ಅವರ ಸಣ್ಣ ಕಥೆಗಳು ಹಳ್ಳಿಯ ಬಡತನ,

ಮೂಢನಂಬಿಕೆ, ಶೋಷಣೆ ಮತ್ತು ಸಾಮಾಜಿಕ ಅನ್ಯಾಯಗಳ ಅನೇಕ ಮುಖಗಳನ್ನು ಕಥಾವಸ್ತುಗಳಾಗಿ ರೂಪಿಸಿಕೊಂಡಿವೆ. 'ಬುಗುರಿ', 'ಮಣ್ಣು', 'ಅತ್ತೆ', 'ಭೂಮಿ', 'ಕನ್ನೆ ಮಳೆ', 'ದೇವರ ದಾರಿ' ಮುಂತಾದ ಕಥೆಗಳು ಹಳ್ಳಿಯ ಬದುಕಿನ ನೈಜ ಸತ್ಯಗಳನ್ನು ಯಾವುದೇ ಅಲಂಕಾರಿಕತೆ ಇಲ್ಲದೆ ನಿಷ್ಠುರವಾಗಿ ಅನಾವರಣಗೊಳಿಸುತ್ತವೆ. ಈ ಕಥೆಗಳಲ್ಲಿನ ಪ್ರಮುಖ ಶಕ್ತಿಯೆಂದರೆ, ಲೇಖಕರು ತಮ್ಮ ಬಾಲ್ಯಕಾಲದ ಹಳ್ಳಿಯ ಅನುಭವಗಳನ್ನು ಸೃಜನಶೀಲವಾಗಿ ಕಥೆಗಳಾಗಿ ರೂಪಿಸುವುದು. ಹಳ್ಳಿಯ ಬಹುಪಾಲು ಬದುಕು ತಮ್ಮ ಅಜ್ಜಿ, ಅತ್ತೆ, ತಾಯಿ, ಹೆಣ್ಣುಮಕ್ಕಳು ಮತ್ತು ಅವರ ಸುತ್ತಲಿನ ಸಂಬಂಧ ಜಾಲ; ಇವೆಲ್ಲವೂ ಕಥೆಗಳಲ್ಲಿ ಜೀವಂತವಾಗಿ ಮೂಡಿಬರುತ್ತವೆ. ಈ ಸಂಬಂಧಗಳೊಳಗೆ ಹೆಣ್ಣುಮಕ್ಕಳು ಮತ್ತು ದಲಿತ ಸಮುದಾಯ ಎದುರಿಸುವ ಕ್ರೂರವಾದ ಸಾಮಾಜಿಕ ಜಗತ್ತು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಲೇಖಕರು ಸ್ಪಷ್ಟವಾಗಿ ತೋರಿಸುತ್ತಾರೆ.

ಮೊಗಳ್ಳಿ ಗಣೇಶ್ ಅವರ ಕಥೆಗಳಲ್ಲಿ ಪಾತ್ರಗಳು ಯಾವ ಸ್ಥಿತಿಯಲ್ಲಿದ್ದರೂ, ಯಾವ ವರ್ಗ, ಜಾತಿಗೆ ಸೇರಿದವರಾಗಿದ್ದರೂ, ಬದುಕು ಅವರಿಗೆ ಹೇಗೆ ಅನ್ಯಾಯವಾಗಿ ವರ್ತಿಸುತ್ತದೆ ಎಂಬ ಅನುಭವಗಳು ಮುಖ್ಯವಾಗುತ್ತವೆ. ಹಳ್ಳಿಯ ಸಮಾಜ ನಿರ್ದಿಷ್ಟ ವ್ಯಕ್ತಿಗಳನ್ನು ಹೇಗೆ ಹೊರಗಿಡುತ್ತದೆ, ಹೇಗೆ ಮೌನವಾಗಿ ಹಿಂಸಿಸುತ್ತದೆ ಮತ್ತು ಹೇಗೆ ಅವರ ಕನಸುಗಳನ್ನು ನುಚ್ಚುನೂರು ಮಾಡುತ್ತದೆ ಎಂಬ ಸತ್ಯಗಳು ಕಥೆಗಳ ಮೂಲಕ ಸ್ಪಷ್ಟವಾಗುತ್ತವೆ. ಈ ಕಥೆಗಳಲ್ಲಿ ಬಳಕೆಯಾಗುವ ಭಾಷೆ ಮತ್ತು ನಡೆ–ನುಡಿ ನೇರವಾಗಿದ್ದು, ಅತಿರೇಕವಿಲ್ಲದ ನಿಷ್ಠುರತೆಯನ್ನು ಹೊಂದಿದೆ. ಸ್ಥಳೀಯ ಹಾಡುಮಾತು, ಕೇರಿ ಭಾಷೆ ಮತ್ತು ಗ್ರಾಮೀಣ ಸಂಭಾಷಣೆಯ ಬಳಕೆ ಕಥೆಗಳಿಗೆ ನೈಜತೆಯನ್ನು ನೀಡುತ್ತದೆ. ಇದರಿಂದ ಓದುಗನಿಗೆ ಕಥೆಗಳು ಕೇವಲ ಓದುವ ಅನುಭವವಾಗದೆ ಹಳ್ಳಿಯ ಬದುಕನ್ನು ನೇರವಾಗಿ ಅನುಭವಿಸುವ ಅನುಭೂತಿಯನ್ನು ನೀಡುತ್ತವೆ.

ಇವರ 'ಗಂಟೆ ಜೋಗಿ' ಎಂಬ ಕಥೆಯೂ ಇದೇ ರೀತಿಯ ಗ್ರಾಮೀಣ ಜೀವನದ ಕಹಿ ಸತ್ಯವನ್ನು ಚಿತ್ರಿಸುತ್ತದೆ. ಜೋಗಿಯು ಊರಿನಲ್ಲಿ ಯಾರೂ ಇಲ್ಲದ ನಿರ್ಗತಿಕನಾಗಿ, ಅಂದಿನ ಕೂಲಿ–ನಾಲಿ ಸಂಪಾದನೆಯಿಂದಲೇ ದಿನಕಳೆಯುವ ವ್ಯಕ್ತಿಯಾಗಿರುತ್ತಾನೆ. ಕೆಲಸ ದೊರೆಯದ ಸಂದರ್ಭಗಳಲ್ಲಿ "ಕೆಲಸ ಬಿದ್ದಾಗ ಮಾಡಿಕೊಡುತ್ತೇನೆ" ಎಂದು ಹೇಳಿ ಹಣ ಪಡೆದು ನಂತರ ಅದನ್ನು ತೀರಿಸುವ ಸಲುವಾಗಿ ವಿವಿಧ ಕೆಲಸಗಳನ್ನು ಮಾಡುತ್ತಿರುತ್ತಾನೆ. ಅವನ ಈ ಅಸಹಾಯಕ ಪರಿಸ್ಥಿತಿಯನ್ನು ಕೆಲವರು ದುರುಪಯೋಗಪಡಿಸಿಕೊಳ್ಳುತ್ತಾರೆ. ಕೂಲಿಗೆ ತಕ್ಕ ಹಣ ನೀಡದಿದ್ದಾಗ ಅಸಹಾಯಕನಾದ ಜೋಗಿ ಗೌಡರ ಮನೆಯಲ್ಲಿ ಗಡಿಯಾರವನ್ನು ಕದಿಯುವ ಸಂದರ್ಭ ಎದುರಾಗುತ್ತದೆ. ಈ ಸಂದರ್ಭದಲ್ಲಿ ಊರಿನವರ ಮುಂದೆ ಸಿಕ್ಕಿಬಿದ್ದ ಜೋಗಿಗೆ 'ಗಂಟೆ ಜೋಗಿ' ಎಂಬ ಹೆಸರು ಬಿದ್ದು, ಮುಂದೆ ಅದೇ ಹೆಸರು ಅವನ ಅನ್ವರ್ಥನಾಮವಾಗಿ ಉಳಿಯುತ್ತದೆ.

ಹಳ್ಳಿಯ ಸಾಮಾಜಿಕ ಬದುಕಿನಲ್ಲಿ ವ್ಯಕ್ತಿಯ ಯಾವುದಾದರೂ ಒಂದು

ಸಂದರ್ಭ, ಘಟನೆ, ವರ್ತನೆ ಅಥವಾ ಗುಣವನ್ನು ಆಧರಿಸಿ ಜನರು ನೀಡುವ ಹೆಸರುಗಳು ಮುಂದೆ ಅವರ ಅನ್ವರ್ಥನಾಮವಾಗಿ ರೂಢಿಯಾಗುವುದು ಸಾಮಾನ್ಯ. ಇಂತಹ ಹೆಸರುಗಳ ಮೂಲಕ ಗ್ರಾಮೀಣ ಜನರ ಹಾಸ್ಯಪ್ರಜ್ಞೆ, ಲೇವಡಿ, ಸಾಮಾಜಿಕ ವ್ಯಂಗ್ಯ ಹಾಗೂ ವ್ಯಕ್ತಿಯ ಅಸಹಾಯಕತೆಯನ್ನು ಗುರುತಿಸುವ ರೀತಿಯನ್ನು ಗಮನಿಸಬಹುದು. 'ಗಂಟೆ ಜೋಗಿ' ಎಂಬ ಹೆಸರು ಕೂಡ ಇದೇ ಗ್ರಾಮೀಣ ನಾಮಕರಣದ ವಿಶಿಷ್ಟ ಸ್ವರೂಪವನ್ನು ಪ್ರತಿನಿಧಿಸುತ್ತದೆ.

ರಾಮನಗರ ಜಿಲ್ಲೆಯ ಕಥೆಗಾರರ ಕಥೆಗಳು ಗ್ರಾಮೀಣ ಬದುಕಿನ ನೈಜ ಸ್ಪಂದನೆಯನ್ನು ವಿವಿಧ ನೆಲೆಗಳಿಂದ ಕಟ್ಟಿಕೊಡುತ್ತವೆ. ಕೃಷಿ ಆಧಾರಿತ ಜೀವನ, ಭೂಮಿ–ಮಾನವ ಸಂಬಂಧ, ದುಡಿಮೆ, ಬಡತನ, ಜಾತಿ–ವರ್ಗ ವೈಷಮ್ಯ, ಮಹಿಳೆಯರ ಬದುಕು, ಜನಪದ ಪರಂಪರೆ, ಪ್ರಕೃತಿ ಹಾಗೂ ಪರಿಸರದ ಜೊತೆಗಿನ ಆತ್ಮೀಯತೆ ಇವು ಕಥೆಗಳ ಹೃದಯವಾಗಿವೆ. ಒಟ್ಟಾರೆ ಈ ಕಥೆಗಳು ಗ್ರಾಮೀಣ ಬದುಕನ್ನು ಕೇವಲ ನೆನಪುಗಳಾಗಿ ಅಲ್ಲ, ಬದಲಾವಣೆಯ ಮಧ್ಯದಲ್ಲಿರುವ ಜೀವಂತ ವಾಸ್ತವವಾಗಿ ಚಿತ್ರಿಸಿ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಆಶಯವನ್ನು ಬಲಪಡಿಸುತ್ತವೆ.

ಉಪಸಂಹಾರ:

ಈ ರೀತಿಯಾಗಿ ಸ್ಥಳೀಯ ಸಂಸ್ಕೃತಿಯನ್ನು ತಮ್ಮ ಕಥನದೊಳಗೆ ಅರಗಿಸಿಕೊಂಡು, ಅಲ್ಲಿನ ಬದುಕಿನ ನೈಜ ಚಿತ್ರಣವನ್ನು ಕಟ್ಟಿಕೊಡುವುದರ ಜೊತೆಗೆ ಪ್ರಾದೇಶಿಕ ಭಾಷೆಯ ಸೊಗಡನ್ನು ಸಮರ್ಥವಾಗಿ ಉಳಿಸಿಕೊಂಡಿದ್ದಾರೆ. ಈ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಪ್ರಾದೇಶಿಕ ಅಸ್ಮಿತೆಯನ್ನು ಸ್ಥಾಪಿಸಿಕೊಂಡು, ಸಣ್ಣಕಥಾ ಸಾಹಿತ್ಯದ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಿದ ಕಥೆಗಾರರಾಗಿ ಹೊರಹೊಮ್ಮಿದ್ದಾರೆ. ಪ್ರಾದೇಶಿಕ ಬದುಕಿನ ವೈವಿಧ್ಯತೆ, ಸ್ಥಳೀಯ ಸಂಸ್ಕೃತಿ, ಭಾಷೆ ಮತ್ತು ಜನಜೀವನವನ್ನು ಕಥನದ ಜೀವಾಳವನ್ನಾಗಿಸಿದ ಈ ಕಥೆಗಾರರ ಕೊಡುಗೆ ಕನ್ನಡ ಸಣ್ಣಕಥಾ ಸಾಹಿತ್ಯದಲ್ಲಿ ಅಪಾರವಾದುದಾಗಿದೆ.

ಪರಾಮರ್ಶನ ಗ್ರಂಥಗಳು:

1. ಕಾಳೇಗೌಡ ನಾಗವಾರ, (2011), ಕಥಾ ಸಂಪುಟ, ಬೆಂಗಳೂರು: ಸಪ್ನ ಬುಕ್ ಹೌಸ್.
2. ಸುಧಾಕರ, (2011), ಕಣ್ಣಿಕಿತ್ತ ಹಸು ಮತ್ತು ಇತರ ಕಥೆಗಳು, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
3. ಮೊಗಳ್ಳಿ ಗಣೇಶ್, (2008), ಮೊಗಳ್ಳಿ ಕಥಾ ಸಂಪುಟ, ಬೆಂಗಳೂರು: ಸಪ್ನ ಬುಕ್ ಹೌಸ್.
4. ನಾಗಭೂಷಣ ಎಸ್., (2015), ರೇಷ್ಮೆ ನಾಡಿನ ಕಥೆಗಳು, ರಾಮನಗರ: ಸಾಹಿತ್ಯ ಸಂಗಮ ಟ್ರಸ್ಟ್.